

# ಪ್ರಶ್ನೆಗಳ ದಾರಿಯ ಪಥಿಕ

■ ಪ್ರವೀಣ ಕುಲಕರ್ಣಿ

‘ನಮಗೆ ಏನು ಬೇಕೆನ್ನುವುದು ಕೊನೆಗೂ ಗೊತ್ತಾಗುವುದೇ ಇಲ್ಲ. ಏಕೆಂದರೆ, ನಾವು ಒಂದು ಕಾಲಕ್ಕೆ ಒಂದು ಬದುಕನ್ನು ಮಾತ್ರ ಉಸಿರಾಡುತ್ತಿರುತ್ತೇವೆ. ಸದ್ಯದ ಬದುಕನ್ನು ಪೂರ್ವದ ಜೀವನದೊಂದಿಗೆ ಹೋಲಿಕೆ ಮಾಡಲಿಕ್ಕೂ ಆಗದು, ಹಾಗೆಯೇ ಭವಿಷ್ಯದ ಬದುಕುಗಳಲ್ಲಿ ಈಗಿನ ಕೊರತೆಗಳನ್ನೆಲ್ಲ ನೀಗಿಸಿಕೊಳ್ಳುವೆವು ಎಂದುಕೊಳ್ಳಲೂ ಆಗದು’.

ಝೆಕ್‌ನ ಮಹಾನ್ ಬರಹಗಾರರಲ್ಲಿ ಒಬ್ಬರಾಗಿದ್ದ ಮಿಲನ್ ಕುಂದೆರಾ ಕಳೆದ ವಾರ ಅಸುನೀಗಿದಾಗ ಅವರ ಬಹುಚರ್ಚಿತ ಕೃತಿ ‘ದಿ ಅನ್ ಬೇರಬಲ್ ಲೈಟ್‌ನೆಸ್ ಆಫ್ ಬೀಯಿಂಗ್’ನ ಈ ಸಂಭಾಷಣೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರವಾಹೋಪಾದಿಯಲ್ಲಿ ಹರಿದಾಡಿತು. ಜಗತ್ತಿನ ಅತಿ ವಿಶಿಷ್ಟ ಲೇಖಕರ ಪಟ್ಟಿಯಲ್ಲಿ ಸ್ಥಾನ ಪಡೆದಂತಹ ಹೆಸರು ಕುಂದೆರಾ ಅವರದು. ಅವರ ಬದುಕಿನ ಫಿಲಾಸಫಿಯೇ ಅಂತಹದ್ದು.

‘ದಿ ಅನ್ ಬೇರಬಲ್ ಲೈಟ್‌ನೆಸ್ ಆಫ್ ಬೀಯಿಂಗ್’ ಕಾದಂಬರಿಯ ಕಥಾವಸ್ತು ಬಲು ಸಂಕೀರ್ಣವಾಗಿದೆ. ಆದರೆ, ಝೆಕ್‌ನ ಪರಿಸ್ಥಿತಿಯನ್ನು ಓದುಗನೊಂದಿಗೆ ಪರಿಣಾಮಕಾರಿಯಾಗಿ ಮುಖಾಮುಖಿಯಾಗಿಸುವಲ್ಲಿ ಯಶಸ್ವಿಯಾಗಿದೆ. ಝೆಕ್‌ನ ರಾಜಧಾನಿ ಪ್ರಾಗ್‌ನಲ್ಲಿ ಸೋವಿಯತ್ ರಷ್ಯಾದ ಟ್ಯಾಂಕ್‌ಗಳು ಹಾಯ್ದುಹೋದ ಬಳಿಕ ಅಲ್ಲಿನ ಎರಡು ಜೋಡಿಗಳಾದ ಥಾಮಸ್ ಮತ್ತು ತೆರೇಸಾ, ಸಬೀನಾ ಮತ್ತು ಫ್ರಾಂಜ್ ಅವರ ಬದುಕಿನಲ್ಲಾದ ಪಲ್ಲಟಗಳ ಎಳೆಗಳನ್ನು ಶೋಧಿಸುವ ಈ ಕಾದಂಬರಿ ಹಲವು ಪ್ರಶ್ನೆಗಳನ್ನು ಎತ್ತುತ್ತಾ ಹೋಗುತ್ತದೆ. ಬದುಕು ಹೊರೆ ಎನಿಸುತ್ತಾ ಹೋದಾಗ ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು? ಭಾರವನ್ನೇ, ಹಗುರವನ್ನೇ? ನಾವು ಭೂಮಿಯಲ್ಲೇ ಪುಡಿಪುಡಿಯಾಗಿ ತೆವಳಬೇಕೇ ಅಥವಾ ಗಾಳಿಗಿಂತ ಹಗುರವಾಗಿ ತೇಲಬೇಕೇ? ಮತ್ತೆ ಇದಕ್ಕೆಲ್ಲ ಇರುವ ದಾರಿಯಾದರೂ ಯಾವುದು? ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕುತ್ತಾ ಕಥೆ ವಿಸ್ತಾರವಾಗುತ್ತಾ ಸಾಗುತ್ತದೆ.

ಕುಂದೆರಾ ಅವರು ಬದುಕಿದ್ದುದು 94 ವರ್ಷಗಳ ತುಂಬು ಜೀವನವನ್ನು. ತಮ್ಮ ಇಡೀ ಆಯುಷ್ಯವನ್ನು ಅವರು ಕಥೆಗಳ ಹುಡುಕಾಟದಲ್ಲೇ ಕಳೆದವರು. ಒಂದು ಕಥೆ ಮತ್ತೊಂದಕ್ಕೆ ಡಿಕ್ಕಿ ಹೊಡೆದು, ಆ ಘರ್ಷಣೆಯಲ್ಲಿ ಪ್ರಶ್ನೆಗಳು ಉದುರುತ್ತಾ ಹೊರಟಾಗ, ಪ್ರತಿಯೊಂದರ ಬಗೆಗೂ ಅವರು ಪ್ರಶ್ನೆ ಎತ್ತುತ್ತಲೇ ಸಾಗಿದರು. ಅದು ಸಾವು–ಬದುಕಿನ ಕುರಿತೇ ಆಗಿರಬಹುದು, ರಾಜಕೀಯ–ಖಾಸಗಿತನದ ಕುರಿತೇ ಆಗಿರಬಹದು, ಮರೆತುಬಿಡುವ–ಸ್ಮರಣೆಯಲ್ಲಿಡುವ ವಿಷಯವೇ ಆಗಿರಬಹುದು, ಪ್ರಶ್ನೆ, ಪ್ರಶ್ನೆ ಮತ್ತು ಪ್ರಶ್ನೆ ಇದು ಕುಂದೆರಾ ಅವರ ಮಂತ್ರವಾಗಿತ್ತು. ಸಂದರ್ಶನವೊಂದರಲ್ಲಿ ‘ಪ್ರತಿಯೊಂದರ ಕುರಿತು ಪ್ರಶ್ನಿಸುತ್ತಲೇ ಕಾದಂಬರಿಯ ವಿವೇಕ ಹುಟ್ಟುವುದು’ ಎಂದು ಅವರು ಹೇಳಿದ್ದರು.

ನಿರಂಕುಶಾಧಿಕಾರದ ವಿರುದ್ಧ ಅವರ ಬರಹಗಳು ಎದೆ ಸೆಟೆಸಿ ನಿಂತಿದ್ದವು ಎಂದೇ ಹೇಳಬೇಕು. ‘ಅಧಿಕಾರದ ವಿರುದ್ಧದ ಸಾಮಾನ್ಯನ ಹೋರಾಟವೆಂದರೆ ಅದು ಮರೆವಿನ ವಿರುದ್ಧದ ಸ್ಮರಣೆಯ ಹೋರಾಟವೇ ಆಗಿದೆ’ ಎಂಬ ಅವರ ವ್ಯಾಖ್ಯಾನ ಸಲ್ಮಾನ್ ರಷ್ದಿ ಅವರಂತಹ ಲೇಖಕರಲ್ಲೂ ವೈಚಾರಿಕ ಕಿಡಿ ಹೊತ್ತಿಸಿತ್ತು.

ಪ್ರಭುತ್ವದ ವಿರುದ್ಧ, ನಿರಂಕುಶಾಧಿಕಾರದ ವಿರುದ್ಧ ಪ್ರಶ್ನೆ ಎತ್ತಿದ ‘ತಪ್ಪಿ’ಗಾಗಿ ಅವರು ಝೆಕೊಸ್ಲೋವಾಕಿಯಾದ ಕಮ್ಯುನಿಸ್ಟರ ಕೆಂಗಣ್ಣಿಗೆ ಗುರಿಯಾಗಿ ದೇಶದಿಂದಲೇ ಹೊರಬೀಳಬೇಕಾಯಿತು. 1993ರಲ್ಲಿ ಅವರ ಝೆಕೊಸ್ಲೋವಾಕಿಯಾ ದೇಶ ಝೆಕ್ ರಿಪಬ್ಲಿಕ್ ಮತ್ತು ಸ್ಲೋವಾಕಿಯಾ ಎಂಬ ಎರಡು ರಾಷ್ಟ್ರಗಳಾಗಿ ಹೋಳಾಯಿತು. ಈ ಗಂಭೀರ ಬರಹಗಾರನೊಳಗೆ ಒಂದು ತುಂಟ ವ್ಯಕ್ತಿತ್ವವೂ ಇತ್ತು ಎನ್ನುವುದನ್ನು ಅವರ ಆತ್ಮೀಯಬಳಗ ಗುರುತಿಸಿದ್ದಿದೆ. ಫ್ರಾನ್ಸ್‌ನಲ್ಲಿ ನೆಲೆ ನಿಂತಮೇಲೆ ಫ್ರೆಂಚ್ ಭಾಷೆಯಲ್ಲೂ ಅವರು ಕಾದಂಬರಿ ಬರೆದಿದ್ದಿದೆ. ನೊಬೆಲ್ ಸಾಹಿತ್ಯ ಪ್ರಶಸ್ತಿಗೆ ಅವರು ದೀರ್ಘಕಾಲದಿಂದ ಸ್ಪರ್ಧಿಯಾಗಿದ್ದವರು.

ಝೆಕ್ ರಿಪಬ್ಲಿಕ್‌ನ ಬ್ರುನೊದಲ್ಲಿ ಜನಿಸಿದ (ಜನನ: 1929ರ ಏಪ್ರಿಲ್ 1), ಪ್ರಾಗ್‌ನ ಫಿಲ್ಮ್ ಅಕಾಡೆಮಿಯಲ್ಲಿ ಸಾಹಿತ್ಯ ಅಧ್ಯಯನ ಮಾಡಿದವರು. ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದ ಅವರು ವಾಕ್ ಸ್ವಾತಂತ್ರ್ಯಕ್ಕಾಗಿ, ಸಮಾನತೆಗಾಗಿ ಸ್ವಪಕ್ಷೀಯರ ವಿರುದ್ಧವೇ ಧ್ವನಿ ಎತ್ತಿದವರು. ಅದಕ್ಕಾಗಿಯೇ ದೇಶದಿಂದ ಹೊರದಬ್ಬಿಸಿಕೊಂಡವರು. ತವರಿನಿಂದ ದೂರ, ಬಲುದೂರ– ಪ್ಯಾರಿಸ್‌ನಲ್ಲಿ– ತಮ್ಮ ಬದುಕಿನ ಬಹುಭಾಗವನ್ನು ಕಳೆದವರು. ಕಾದಂಬರಿಯಲ್ಲಿ ಮಾಡಿದ ಸ್ತ್ರೀ ಚಿತ್ರಣಕ್ಕಾಗಿ ಸ್ತ್ರೀವಾದಿಗಳ ವಿರೋಧ ಕಟ್ಟಿಕೊಂಡವರು. ಅವರ ಕೃತಿಗಳಲ್ಲಿ ಸಂಗೀತದ ತಂತುಗಳೂ ಮೀಟುತ್ತಿದ್ದವು. ಅವರ ತಂದೆ ಪಿಯಾನೊ ವಾದಕರಾಗಿದ್ದುದು ಬಹುಶಃ ಅವರ ಮೇಲೆ ಪ್ರಭಾವ ಬೀರಿರಬೇಕು.

ಹೌದು, ಕುಂದೆರಾ ಅವರು ಈಗಿಲ್ಲ; ಅವರು ಹೊತ್ತಿಸಿ ಹೋದ ಪ್ರತಿಯೊಂದನ್ನೂ ಪ್ರಶ್ನಿಸಬೇಕೆಂಬ ಅರಿವಿನ ಬೆಳಕು ಬೆಳಗುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65